ದೂರವಾಣಿ ಸಂಖ್ಯೆ : 080-22100409
ಅಂತರ್ಜಾಲ : https://kptcl.karnataka.gov.in
ಇ-ಮೇಲ್ ವಿಳಾಸ: admin@kptcl.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009.

ಸಂಖ್ಯೆ: ಬಿ31/ಅ.ಇಂ(ಐ.ಟಿ)/ಕಾ.ನಿ.ಇಂ(ಐಟಿ-1)/ಸ.ಕಾ.ನಿ.ಇಂ-2/1375/20-21 ದಿನಾಂಕ : 05-01-2021

## ಸುತ್ತೋಲೆ

**ವಿಷಯ: ಕವಿಪ್ರನಿನಿ, ನಿಗಮ ಕಾರ್ಯಾಲಯದಲ್ಲಿ ಇ-ಕಛೇರಿ ತಂತ್ರಾಂಶವನ್ನು ಅನುಷ್ಠಾನಗೊಳಿಸುವ ಬಗ್ಗೆ**

**ಉಲ್ಲೇಖ :**

1. ಬಿ31/ಅಇಂ(ಐಟಿ&ಎಂಐಎಸ್)/ಕಾನಿಇಂ-1/ಸಕಾನಿಇಂ-2/1379/2020-21. ದಿನಾಂಕ:29.10.2020
2. ಬಿ31/ಅಇಂ(ಐಟಿ&ಎಂಐಎಸ್)/ಕಾನಿಇಂ-1/ಸಕಾನಿಇಂ-2/1379/2020-21. ದಿನಾಂಕ:07.11.2020

***

ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ನಿರ್ದೇಶನದಂತೆ, ಕವಿಪ್ರನಿನಿಯ ನಿಗಮ ಕಾರ್ಯಾಲಯದಲ್ಲಿ ಇ-ಕಛೇರಿ ತಂತ್ರಾಂಶವನ್ನು ಅನುಷ್ಠಾನಗೊಳಿಸಿ, ದಿನಾಂಕ 01.12.2020 ರಿಂದ ಸದರಿ ತಂತ್ರಾಂಶದ ಮೂಲಕ ಕಡತಗಳ ನಿರ್ವಹಣೆಯನ್ನು ಕೈಗೊಳ್ಳಲಾಗಿದೆ.

ಇದಕ್ಕೆ ಸಂಬಂಧಿಸಿದಂತೆ, ಈಗಾಗಲೇ ಕಡತವನ್ನು ನಿರ್ವಹಿಸುವ ಅಧಿಕಾರಿ/ನೌಕರರಿಗೆ ಪ್ರತ್ಯೇಕವಾದ ಇ-ಮೇಲ್ ಹಾಗೂ ಪಾಸ್ ವರ್ಡ್ ಗಳನ್ನು ರಚಿಸಿ, ಇ-ಆಡಳಿತ ಕೇಂದ್ರ, ಕರ್ನಾಟಕ ಸರ್ಕಾರ ದಿಂದ ಕಳುಹಿಸಲಾಗಿದೆ.

ಸದರಿ ತಂತ್ರಾಂಶವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಹಾಗೂ ತಂತ್ರಾಂಶವನ್ನು ಬಳಸಲು ಅನುಕೂಲವಾಗುವಂತೆ, ಪ್ರತಿ ಕಛೇರಿ/ಶಾಖೆಯಲ್ಲಿ ಕಂಪ್ಯೂಟರ್ ಕೌಶಲ್ಯತೆ ಹೊಂದಿರುವ ಅಧಿಕಾರಿ/ನೌಕರರಿಗೆ ತರಬೇತಿಯನ್ನು ಇ-ಆಡಳಿತ ಕೇಂದ್ರದ ವತಿಯಿಂದ ದಿನಾಂಕ 04-11-2020 ಮತ್ತು 05-11-2020 ರಂದು ನೀಡಲಾಗಿದ್ದು, ಸದರಿ ಅಧಿಕಾರಿಗಳು ತರಬೇತಿಯನ್ನು ಪಡೆದುಕೊಂಡ ನಂತರ, ತಮ್ಮ ಇತರೆ ಸಹೋದ್ಯೋಗಿಗಳಿಗೂ ತರಬೇತಿಯನ್ನು ನೀಡುವಂತೆ ಹಾಗೂ ದಿನಾಂಕ 01-12-2020 ರಿಂದ ಶಾಖೆ/ಕಛೇರಿಗಳಲ್ಲಿ ಇ-ಕಛೇರಿ ತಂತ್ರಾಂಶದಲ್ಲಿಯೇ ಕಡತವನ್ನು ನಿರ್ವಹಿಸುವಂತೆ ಉಲ್ಲೇಖ 2 ರ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಆದರೆ, ನಿಗಮ ಕಾರ್ಯಾಲಯದ ಹಲವು ಕಛೇರಿ/ಶಾಖೆಗಳಲ್ಲಿ, ಇ-ಕಛೇರಿ ತಂತ್ರಾಂಶವನ್ನು ಬಳಸದಿರುವುದು ಕಂಡುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ, ನಿಗಮ ಕಾರ್ಯಾಲಯದ ಕಛೇರಿ/ಶಾಖಾ ಮುಖ್ಯಸ್ಥರು ತಮ್ಮ ಅಧೀನದಲ್ಲಿರುವ ಕಛೇರಿ/ಶಾಖೆಯ ಅಧಿಕಾರಿ/ನೌಕರರಿಗೆ ಕಡತಗಳ ನಿರ್ವಹಣೆಗಾಗಿ ಇ-ಕಛೇರಿ ತಂತ್ರಾಂಶವನ್ನು ಕಡ್ಡಾಯವಾಗಿ ಇಂದಿನಿಂದಲೇ ಅಳವಡಿಸಿಕೊಳ್ಳಲು ಸೂಕ್ತ ನಿರ್ದೇಶನವನ್ನು ನೀಡುವಂತೆ ಸೂಚಿಸಲಾಗಿದೆ.

ಇ-ಕಛೇರಿ ತಂತ್ರಾಂಶಕ್ಕೆ ಸಂಬಂಧಿಸಿದಂತೆ, ಯಾವುದೇ ಮಾಹಿತಿಗಳ (ಇ-ಮೇಲ್ ಹಾಗೂ ಪಾಸ್ ವರ್ಡ್) ಅವಶ್ಯಕತೆ ಇದ್ದಲ್ಲಿ ಮಾಹಿತಿ ತಂತ್ರಜ್ಞಾನ ಶಾಖೆಯನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ.

ನಿರ್ದೇಶಕರು (ಆ ಮತ್ತು ಮಾ.ಸಂ)
ನಿಗಮ ಕಾರ್ಯಾಲಯ, ಕವಿಪ್ರನಿನಿ

ಪ್ರತಿಗಳು:

1. ಎಲ್ಲಾ ಮುಖ್ಯ ಇಂಜಿನಿಯರುಗಳು(ವಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ. ಕಾವೇರಿ ಭವನ, ಬೆಂಗಳೂರು

3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/(ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ),( ಐಟಿ ಮತ್ತು ಎಂಐಎಸ್)-ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/(ಸಿವಿಲ್), ಕವಿಪ್ರನಿನಿ, ಕಾವೇರಿ ಭವನ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಪ್ರಸರಣಾ)/ ನಿರ್ದೇಶಕರು(ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.